**ಕರ್ನಾಟಕ ಸರ್ಕಾರ**

ಸಂ: ಎ.ಎಲ್.ಎನ್[ಎ][ಎಸ್]ಎಸ್ಆರ್/228/13–14

ಜಿಲ್ಲಾಧಿಕಾರಿಗಳವರ ಕಾರ್ಯಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು ದಿನಾಂಕ: 24–06–2014

**–:: ಪರಿಷ್ಕೃತ ಅಧಿಕೃತ ಜ್ಞಾಪನ ::–**

**ವಿಷಯ:–** ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, **ಸರ್ಜಾಪುರ ಹೋಬಳಿ, ಕಾಡಅಗ್ರಹಾರ ಗ್ರಾಮದ** ಸ.ನಂ. 44 **ರಲ್ಲಿ 2–25.08 ಎ/ಗುಂ** ವಿಸ್ತೀರ್ಣದ ಜಮೀನನ್ನು **ವಾಸದ ಉದ್ದೇಶಕ್ಕೆ** ಭೂ ಪರಿವರ್ತಿಸಿದ್ದು, ಅದರಲ್ಲಿ 0–08 ಗುಂಟೆ ಕಡಿತಗೊಳಿಸಿ ಕೊಡುವ ಮನವಿ ಮೇರೆಗೆ.

**ಉಲ್ಲೇಖ:–** ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರದ ಸಂ: ಎ.ಎಲ್.ಎನ್[ಎ][ಎಸ್]ಎಸ್ಆರ್/228/13–14 ದಿನಾಂಕ: 24–02–2014.

* * *

ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, **ಸರ್ಜಾಪುರ ಹೋಬಳಿ, ಕಾಡಅಗ್ರಹಾರ ಗ್ರಾಮದ** ಸ.ನಂ. 44 **ರಲ್ಲಿ 2–25.08 ಎ/ಗುಂ** ವಿಸ್ತೀರ್ಣದ ಜಮೀನನ್ನು **ವಾಸದ ಉದ್ದೇಶಕ್ಕೆ** ಭೂ ಪರಿವರ್ತನೆ ಮಾಡಿದ್ದ ಆದೇಶದಲ್ಲಿ ದನ ಕರುಗಳಿಗೆ ಹುಲ್ಲು ಬೆಳೆಸುವ ಉದ್ದೇಶಕ್ಕೆ 0–08 ಗುಂಟೆ ಸದರಿ ಜಮೀನಿನ ಅಂಚಿನಲ್ಲಿ ಉಳಿಸಿಕೊಳ್ಳಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಅರ್ಜಿದಾರರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಕಾಡಅಗ್ರಹಾರ ಗ್ರಾಮದ ಸ.ನಂ.44 ರಲ್ಲಿ 2–25.08 ಎ/ಗುಂ ಜಮೀನನ್ನು ವಾಸದ ಉದ್ದೇಶಕೆ ಉಲ್ಲೇಖದ ಪ್ರಕಾರ 24–02–2014 ರಂದು ಅಧಿಕೃತ ಜ್ಞಾಪನ ಹೊರಡಿಸಲಾಗಿದೆ.

ಅರ್ಜಿದಾರರು ಸದರಿ ಜಮೀನಿನಲ್ಲಿ 0–08 ಗುಂಟೆಯನ್ನು ದನ ಕರುಗಳಿಗೆ ಹುಲ್ಲು ಬೆಳೆಸುವ ಉದ್ದೇಶದಿಂದ ವ್ಯವಸಾಯದ ಜಮೀನಾಗಿರಿಸಲು ಕೋರಿರುವಂತೆ ಸರ್ಜಾಪುರ ಹೋಬಳಿ, ಕಾಡ ಅಗ್ರಹಾರ ಗ್ರಾಮದ ಸ.ನಂ.44 ರಲ್ಲಿ 2–25.08 ಎ/ಗುಂ ವಾಸದ ಉದ್ದೇಶಕ್ಕೆ ಭೂ ಪರಿವರ್ತನೆ ಎಂಬುದನ್ನು 2–17.08 ಎ/ಗುಂ ವಾಸದ ಉದ್ದೇಶಕ್ಕೆ ಎಂದು ಬದಲಾವಣೆ ಮಾಡಲಾಗಿದೆ.

ದಿನಾಂಕ:24–02–2014 ರಂದು ನೀಡಿಂದ ಭೂ ಪರಿವರ್ತನಾ ಆದೇಶದಲ್ಲಿ 2–25.08 ಎ/ಗುಂ ಎಂಬುದರ ಬದಲು 2–17.08 ಎ/ಗುಂ ಎಂದು ಓದಿಕೊಳ್ಳತಕ್ಕದ್ದು, ಉಳಿದಂತೆ ದಿನಾಂಕ:24–02–2014 ರಂದು ನೀಡಿರುವ ಭೂ ಪರಿವರ್ತನಾ ಆದೇಶದಲ್ಲಿನ ಯಾವುದೇ ಷರತ್ತುಗಳು ಬದಲಾವಣೆ ಇರುವುದಿಲ್ಲ.

**[ಡಾ॥ ಜಿ.ಸಿ.ಪ್ರಕಾಶ್]**
ಜಿಲ್ಲಾಧಿಕಾರಿಗಳು
ಬೆಂಗಳೂರು ಜಿಲ್ಲೆ.

24/6

**ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ:–**

1. ತಹಶೀಲ್ದಾರ್, ಆನೇಕಲ್ ತಾಲ್ಲೂಕು, ಆನೇಕಲ್ ರವರಿಗೆ.
2. ಸದಸ್ಯ ಕಾರ್ಯದರ್ಶಿ, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3. ಅರ್ಜಿದಾರರಾದ ಶ್ರೀ.ಗೋಪಾಲರೆಡ್ಡಿ ಬಿನ್ ಮುನಿಶಾಮಿರೆಡ್ಡಿ, ಟೀಚರ್ಸ್ ಕಾಲೋನಿ, ವೆಂಕಟಾಪುರ ಮುಖ್ಯರಸ್ತೆ, ಹೆಚ್.ಎಸ್.ಆರ್.ಲೇಔಟ್, ಬೆಂಗಳೂರು ರವರಿಗೆ.
4. ಹೆಚ್ಚಿನ ಪ್ರತಿ.